ಸಿ.ಸಿ ಸಂಖ್ಯೆ:616 /2025

ಪಿಡಬ್ಲ್ಯೂ: 01

ದಿನಾಂಕ: 06-03-2026

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲು: ಆರೋಪಿ ಪರ ಶ್ರೀ. ಎಸ್ ಎಸ್ ಎಚ್ ವಕೀಲರಿಂದ:**

ನೀವು ಪತ್ರಿಕ ವರದಿಗಾರರು ಎಂದು ತೋರಿಸಲು ಯಾವುದಾದರೂ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ನೀವು ಈದೆನ್ಯಾಯಾಲಯದಲ್ಲಿ ಪಿ ಸಿ 12/2025 ನ್ನು ಶಿವಾನಂದ ತಳವಾರ ಮತ್ತು ದ್ಯಾಮಣ್ಣ ಲಮಾಣಿ ರವರ ವಿರುದ್ಧ ದಾಖಲು ಮಾಡಿದ್ದೀರಿ ಎಂದರೆ ಸರಿ. ಸದರಿ ಪ್ರಕರಣವು ಅವರು ಕಳಪೆ ಕಾಮಗಾರಿ ಮಾಡಿದ್ದಾರೆ ಎಂದು ವರದಿ ಮಾಡಲು ಹೋದಾಗ ತಕರಾರು ಆಗಿದ್ದು ಆ ಕುರಿತು ಸದರಿ ಪಿ ಸಿ 12/2025 ನ್ನು ಮಾಡಿರುತ್ತೀರಿ ಎಂದರೆ ಸರಿ. ಇದೇ ರೀತಿ ಬಹಳಷ್ಟು ಕಡೆ ನೀವು ಈ ರೀತಿ ಕಳೆಪೆ ಕಾಮಗಾರಿ ಮಾಡಿದ್ದಾರೆ ಎಂದು ಅಧಿಕಾರಿಗಳಿಗೆ ಹೆದರಿಸಿ ಅವರಿಂದ ಲಂಚ ಪಡೆಯುತ್ತೀರಿ ಎಂಬ ಅಪಾದನೆ ನಿಮ್ಮ ಮೇಲೆ ಇದೆ ಎಂದರೆ ಸರಿಯಲ್ಲ. ಯಾರಾದರೂ ನಿಮ್ಮ ವಿರುದ್ಧ ಮಾತನಾಡಿದರೆ ಅವರ ಮೇಲೆ ಜಾತಿ ನಿಂದನೆ ಮಾಡುತ್ತಾರೆ ಎಂದು ಹೇದರಿಸಿ ಅವರಿಂದ ಲಂಚ ಪಡೆಯುತ್ತೀರಿ ಎಂಬ ಅಪಾದನೆ ನಿಮ್ಮ ಮೇಲೆ ಇದೆ ಎಂದರೆ ಸರಿಯಲ್ಲ. ಅದರಲ್ಲಿರುವ ಶಿವಾನಂದ ತಳವಾರ ಮತ್ತು ದ್ಯಾಮಣ್ಣ ಲಮಾಣಿ ರವರು ಸಹ ಎಸ್ ಸಿ ಎಸ್ ಟಿ ಜಾತಿಗೆ ಸಂಬಂಧಪಟ್ಟಿರುವರು ಎಂದರೆ ಸರಿಯಲ್ಲ.

ಆರೋಪಿಯ ಹೆಸರು ಹೇಳಲು ಆಗುತ್ತದೆಯಾ ಎಂದರೆ ಪರಶುರಾಮ ಶಹಾಪೂರ ಇರುತ್ತದೆ ತಂದೆಯ ಹೆಸರು ಗೊತ್ತಿರುವುದಿಲ್ಲ. ಅವರುಎಷ್ಟು ವರ್ಷದಿಂದ ಪರಿಚಯ ಎಂದರೆ 4 ವರ್ಷದಿಂದ. ಬರಿ ಪರಿಚಯವೋ ಅಥವಾ ಅತ್ಮೀಯತೆ ಇತ್ತೋ ಎಂದರೆ ಬರಿ ಪರಿಚಯ ಇತ್ತು. ನೀವೇನಾದರೂ ಈ ಹಿಂದೆ ಅವರಿಗೆ ಹಣ ಕೊಡುವುದು ಮತ್ತು ಪಡೆದುಕೊಳ್ಳುವುದು ಏನಾದರೂ ಮಾಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೀವು ಆರೋಪಿಗೆ ಹಣ ಕೊಡುವಾಗ ಅವರ ಬಗ್ಗೆ ಪೂರ್ವಾಪರ ವಿಚಾರ ಮಾಡಿದ್ದೀರಾ ಎಂದರೆ ವಿಚಾರ ಮಾಡಿದ್ದೇನೆ. ಆರೋಪಿಗೆ ಹೆಂಡತಿ ಮಕ್ಕಳು, ತಂದೆ-ತಾಯಿ ಇದ್ದಾರಾ ಎಂದರೆ ತಂದೆ-ತಾಯಿ ಇಲ್ಲ, ಹೆಂಡತಿ ಮಕ್ಕಳು ಇದ್ದಾರೆ. ಅವರಿಗೆ ಎಷ್ಟು ಜನ ಮಕ್ಕಳು ಎಂದರೆ ಒಬ್ಬಳು 6-7 ವರ್ಷದ ಹೆಣ್ಣು ಮಗಳು ಹೆಸರು ಗೊತ್ತಿಲ್ಲ. ನಿವೇನಾದರೂ ಆರೋಪಿಯ ಮನೆಗೆ ಹೋಗಿ ಬರುವುದನ್ನು ಮಾಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಪಿರ್ಯಾಧಿಯಲ್ಲಿ ಮತ್ತು ಸ್ವ ಪ್ರಮಾಣಿಕೃತ ಹೇಳಿಕೆಯಲ್ಲಿ ಬರೆದಿರುವ ವಿಷಯವನ್ನುನೀವು ಓದಿ ತಿಳಿದುಕೊಂಡಿದ್ದೀರಾ ಎಂದರೆ ತಿಳಿದುಕೊಂಡಿದ್ದೇನೆ. ನಿಮ್ಮ ಪಿರ್ಯಾಧಿಯಲ್ಲಿ ಮತ್ತು ಸ್ವ ಪ್ರಮಾಣಿಕೃತ ಹೇಳಿಕೆಯಲ್ಲಿ ಆರೋಪಿಗೆ ನೀವು 2024

ಎಪ್ರೀಲ್ ನ ಕೊನೆಯ ವಾರದಲ್ಲಿ ಹಣ ನೀಡಿದ್ದೀರಿ ಎಂದು ಬರೆಸಿದ್ದೀರಿ ಎಂದರೆ ಸರಿ. ಸಾಮಾನ್ಯವಾಗಿ ಕೊನೆಯ ವಾರ ಎಂದರೆ 25 ತಾರೀಖಿನ ನಂತರ ಬರುತ್ತದೆ ಎಂದರೆ ಸರಿ. 2024 ರ ಎಪ್ರೀಲ್ ಕೊನೆಯ ವಾರ ಎಂದರೆ 24 ರನಂತರ ಬರುತ್ತದೆ ಎಂದರೆ 22 ರ ನಂತರ ಬಂದಿರುತ್ತದೆ.

ನೀವು ವರದಿಗಾರ ನಾಗಿರುವುದರಿಂದ ಮತ್ತು ವಿದ್ಯಾಂವತ ನಾಗಿರುವುದರಿಂದ ಇತ್ತೀಚಿನ ಸರ್ಕಾರಿ ಆದೇಶಗಳ ಬಗ್ಗೆ ಮಾಹಿತಿ ಇದೆ ಎಂದರೆ ಸರಿ. 2017 ನೇ ಇಸವಿಯಲ್ಲಿ ಕೇಂದ್ರ ಸರ್ಕಾರವು 20,000/- ಹೆಚ್ಚಿನ ಹಣವನ್ನುನಗದು ಹಣವನ್ನು ವ್ಯವಹಾರ ಮಾಡಬಾರದು ಎಂದು ತಿಳಿಸಿರುತ್ತಾರೆ, ಈ ಕುರಿತು ನಿಮಗೆ ಮಾಹಿತಿ ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸದರಿ ಆದೇಶದಂತೆ ಯಾವುದೇ ವ್ಯಕ್ತಿ 20,000/- ಕ್ಕಿಂತ ಹೆಚ್ಚಿನ ನಗದು ಹಣ ವಹಿವಾಟು ಮಾಡಿದರೆ ಕಲಂ 249 ಐ ಟಿ ಆ್ಯಕ್ಟ ರ ಅಡಿಯಲ್ಲಿ ಅಪರಾಧ ಇದ್ದು ಅದು ನಿಮಗೆ ಗೊತ್ತಿದೆಯಾ ಎಂದರೆ ಇಲ್ಲ ಎಂದು ನುಡಿಯತ್ತಾರೆ.

ನೀವು ಹಣವನ್ನು ಯಾವ ರೂಪದಲ್ಲಿನೀಡಿದ್ದರಿ ಎಂದರೆ ನಗದೂ ರೂಪದಲ್ಲಿ ನೀಡಿದ್ದೇನೆ. ಹಣವನ್ನು ಬ್ಯಾಂಕನಿಂದ ತಂದು ಕೊಟ್ಟಿದ್ದರೋ ಹೇಗೆ ಎಂದರೆ ನಾನು ಬಂಗಾರವನ್ನು ಕರ್ನಾಟಕ ಬ್ಯಾಂಕನಲ್ಲಿ ಅಡವಿಟ್ಟು ಅಲ್ಲಿಂದ ಹಣವನ್ನು ಕೊಟ್ಟಿರುತ್ತೇನೆ. ಆರೋಪಿಯು ಹಣ ಕೇಳಿದ ಎಷ್ಟು ದಿನಗಳ ಬಳಿಕ ಬಂಗಾರವನ್ನು ಅಡಇಟ್ಟಿರುತ್ತೀರಿ ಎಂದರೆ ಆರೋಪಿಯು ಹಣ ಕೇಳಿದ 3 ದಿನಗಳ ನಂತರ ಅಂದರೆ 27 ರಂದು ಅಡ ಇಟ್ಟಿರುತ್ತೇನೆ. ಎಷ್ಟು ಬಂಗಾರವನ್ನು ಅಡ ಇಟ್ಟಿರುತ್ತೀರಿ ಎಂದರೆ 6 ತೋಲೆ ಬಂಗಾರವನ್ನು ಇಟ್ಟಿದ್ದು 2 ಲಕ್ಷ ಹಣವನ್ನು ಬ್ಯಾಂಕನವರು ನಿಡೀರುತ್ತಾರೆ. ಬ್ಯಾಂಕನವರು ನಿಮಗೆ ಹಣ ನೀಡಿದ ಎಷ್ಟು ದಿನಗಳ ನಂತರ ಆರೋಪಿಗೆ ಹಣ ನೀಡಿರುತ್ತೀರಿ ಎಂದರೆ 4-5 ದಿನಗಳ ಬಳಿಕ ನೀಡಿರುತ್ತೇನೆ.

ಮತ್ತು ಅವರು ಒಂದೇ ಕಡೆ ಕೆಲಸ ಮಾಡುವುದಿಲ್ಲ ಎಂದರೆ ಅವರು ಕೂಡ ಸವಣೂರನಲ್ಲಿ ಕೆಲಸ ಮಾಡುತ್ತಿದ್ದರು. ನಿಮಗೆ ಏನಾದರೂ ಆರೋಪಿಯು ಸವಣೂರಿನಲ್ಲಿ ಎಷ್ಟು ವರ್ಷ ಕೆಲಸ ಮಾಡಿರುತ್ತಾರೆ ಮತ್ತು ಈಗ ಎಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸವಣೂರನಲ್ಲಿ ಅವರು 4 ವರ್ಷ ಅವರು ಕೆಲಸ ಮಾಡಿರುತ್ತಾರೆ. ಈಗ ಶಿಗ್ಗಾಂವನಲ್ಲಿ ಕೆಲಸ ಮಾಡುತ್ತಿದ್ದಾರೆ. ಆರೋಪಿಗೆ ಹಣವನ್ನು ನೀವು ಸ್ವಂತ ಹೋಗಿ ಕೊಟ್ಟಿರೋ ಎಂದರೆ ಅವರೇ ಸ್ವತಃ ಬಂದು ಕೇಳಿದರು ಎಂದರೆ ಆರೋಪಿಯೇ ಕರೆ ಮಾಡುತ್ತಿದ್ದರು. ನೀವು ಹಣವನ್ನು ಎಲ್ಲಿ ನೀಡಿರುತ್ತೀರಿ ಎಂದರೆ ಸವಣೂರಿನ ಬಾರತಲಿಂಕ್ ಅನಲೈನ ಸೆಂಟರನಲ್ಲಿ ನೀಡಿರುತ್ತೇನೆ. ಹಣವನ್ನುನೀಡಿದಾಗ ಸಮಯ ಎಷ್ಟಾಗಿತ್ತು ಎಂದರೆ ಸಾಯಂಕಾಲ 4.00 ಗಂಟೆ ಆಗಿತ್ತು.

ಸಾಮಾನ್ಯವಾಗಿ ಸರ್ಕಾರಿ ಆಧಿಕಾರಿ ಬೆಳಿಗ್ಗೆ 10.00 ರಿಂದ ಸಂಜೆ 6.00 ವರಗೆ ಕಚೇರಿ

ಕೆಲಸ ಮಾಡುತ್ತಾರೆ ಎಂದರೆ ಸರಿ. ಅದರಲ್ಲೂ ಕಂದಾಯ ಇಲಾಖೆಯಲ್ಲಿ ಮತ್ತು ಇತರೇ ಕೆಲವು ಇಲಾಖೆಗಳಲ್ಲಿ ಕೆಲಸ ಒತ್ತಡ ಜಾಸ್ತಿ ಇರುವ ಕಾರಣ ಸಂಜೆ 7-8 ಗಂಟೆ ವರೆಗೆ ಕೆಲಸ ಮಾಡುತ್ತಾರೆ ಎಂದರೆ ನಾನು ಇದುವರೆಗೂ ನೋಡಿರುವುದಿಲ್ಲ. ಸಾಮಾನ್ಯವಾಗಿ ಎಲ್ಲಾ ಪ್ರೆಸ್ ವರದಿಗಾರರಿಗೆ ಸರ್ಕಾರಿ ನೌಕರರು ಬೆಳಿಗ್ಗೆ 10.00 ರಿಂದ 5.30 ವರೆಗೆ ಕೆಲಸ ಮಾಡುತ್ತಾರೆ ಎಂದು ತಿಳಿದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯು ಕಚೇರಿ ಅವಧಿಯಲ್ಲಿ ಹೊರಗಡೆ ಬರುತ್ತಿರಲಿಲ್ಲ ಎಂದರೆ 2 ಗಂಟೆಗೆ ಒಮ್ಮೆ ಟೀ ಕುಡಿಯಲು, ಸೀಗರೇಟ್ ಸೇದಲು ಬರುತ್ತಿದ್ದರು. ಸಾಮಾನ್ಯವಾಗಿ ಸರ್ಕಾರಿ ನೌಕರರು ಕರ್ತವ್ಯದ ಸಮಯದಲ್ಲಿ ಟೀ ಕುಡಿಯಲು, ಸೀಗರೇಟ್ ಸೇದಲು ಹೋಗುವದು ಅಪರಾಧ ಎಂದರೆ ಸರಿ. ಆರೋಪಿಯುಎಷ್ಟು ಬಾರಿ ಟೀ ಕುಡಿಯಲು, ಸೀಗರೇಟ್ ಸೇದಲು ಬರುತ್ತಿದ್ದರು ಎಂದರೆ 2 ಬಾರಿ ಬರುತ್ತಿದ್ದರು. ಹಾಗಾದರೆ ಈ ವಿಷಯವನ್ನು ನೀವು ಏಕೆ ವರದಿ ಮಾಡಲಿಲ್ಲ ಎಂದರೆ ಅದು ಅವರ ವಯುಕ್ತಿಕ ವಿಷಯ ಇರುತ್ತದೆ. ನೀವು ಸಮಾಜದ ತಪ್ಪುಗಳನ್ನು ಎತ್ತಿ ತೋರಿಸುವ ಕೆಲಸ ಮಾಡುವವರು ಎಂದರೆ ಸರಿ. ಸಾಮಾನ್ಯವಾಗಿ ಸರ್ಕಾರಿ ಅಧಿಕಾರಿಗಳು ಕರ್ತವ್ಯದ ಸಮಯದಲ್ಲಿ ಹೊರಗೆ ತಿರುಗಾಡುವುದು ಅಪರಾಧ ಇರುತ್ತದೆ ಎಂದರೆ ಸರಿ. ಸದರಿ ಆರೋಪಿಗೆ ಟೀ ಕುಡಿಯುವ ಮತ್ತು ಸೀಗರೇಟ ಸೇದುವ ಅಭ್ಯಾಸ ಇರದೇ ಇದ್ದರು ಇದೇ ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಅವರಿಗೆ ಆ ಆಭ್ಯಾಸಗಳು ಇವೆ ನಾನೇ ನೊಡೀರುತ್ತೇನೆ. ಪ್ರತಿದಿನ ಆರೋಪಿಯು ಟೀ ಕುಡಿಯಲು ಸೀಗರೇಟ ಸೇದರು ಹೋಗುತ್ತಾರಾ ಎಂದರೆ ಪ್ರತಿದಿನ ನಾನು ಗಮನಿಸಿರುವುದಿಲ್ಲ ಕೆಲವೊಮ್ಮ ಮಾತ್ರ ನೋಡಿದ್ದೇನೆ.

ಕರ್ನಾಟಕ ಬ್ಯಾಂಕನಲ್ಲಿ ಬಂಗಾರವನ್ನು ಅಡ ಇಟ್ಟ ಬಗ್ಗೆ ಯಾವುದಾದರೂ ದಾಖಲೆ ಹಾಜರುಮಾಡಿದ್ಧೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಬ್ಯಾಂಕಿನವರು ಹಣವನ್ನುನೀಡಬೇಕಾದರೆ ಅದನ್ನು ಮೊದಲು ಖಾತೆಗೆ ಹಾಕುತ್ತಾರೆ ಎಂದರೆ ಮೊದಲು ನನ್ನ ಖಾತೆಗೆ ಹಾಕಿದ್ದರು ನಾನು ಅದನ್ನು ಡ್ರಾ ಮಾಡಿರುತ್ತೇನೆ. ನಿಮ್ಮ ಖಾತೆಯ ಹೇಳಿಕೆಯನ್ನು ಹಾಜರಪಡಿಸಲು ಆಗುತ್ತದೆಯಾ ಎಂದರೆ 2 ದಿನ ನೀಡಿದರೆ ಹಾಜರುಡಿಸುತ್ತೇನೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು.